ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಯಾವುದೇ ಒಂದು ಸ್ಟೇಟ್ ಗೌರ್ಮೆಂಟ್ ಒಂದೇ ವರ್ಷದಲ್ಲಿ ೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯ ವಿದೆಯೇ ? ಪ್ರೈವೇಟ್‌ನವರಿಗೆ ಆದರೆ ಬೇರೆ ಫೆಸಿಲಿಟೀಸ್ ಕೊಡುತ್ತಾರೆ. Creditors deferred payment system, soft loan system ಇವೆಲ್ಲಾ ಇವೆ. ಆದರೆ ಕೆ.ಇ.ಬಿ. ಯವರಿಗೆ ಏತಕ್ಕೆ ಕೊಡುವುದಿಲ್ಲವೆಂದು ಕೇಳಿದಾಗ ಏನೂ ಉತ್ತರ ಕೊಡಲಿಲ್ಲ. ಈಗ ಎರಡು ಮೂರು ವಾರಗಳ ಹಿಂದೆ ಕೇಳಿದಾಗ ಪರ್ಮಿಶನ್ ಕೊಡುತ್ತೇವೆಂದು ಹೇಳಿದ್ದಾರೆ. That is one project after 2½ years it is being implemented now. ಹಣ ಕೊಡುವುದಕ್ಕೆ ತಯಾರು ಇದ್ದಾರೆ NRI people they are prepared to offer 600 crores. ನಾವು ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಏನೂ ಮಾಡುವಂತೆ ಇಲ್ಲ. ಇವೆಲ್ಲಾ ಕೆಲವು ಪ್ರೊಸೀಜರ್ಸ್ ಇವೆ. ನಾನು ಇನ್‌ಟೆನ್‌ಷನಲ್ ಆಗಿ ಏನೂ ಹೇಳುತ್ತಿಲ್ಲ. ಈಗ ನಮ್ಮ ಪ್ರಪಂಚದಲ್ಲಿ ಬೇಕಾದಷ್ಟು ಹಣ ಇದೆ. ಮಾನ್ಯ ಹಿರಿಯ ಸದಸ್ಯರಿಗೆ ಒಂದು ಮಾತು ಹೇಳಬಯಸುತ್ತೇನೆ, ಅದೇನೆಂದರೆ, Actually, Mr. Sathe wanted to take up this project as immediately as possible. Money is available in the world, plenty of money is available, How to use how to make production. We have to go through only Government of India. We cannot depend on any other agency.

ಶ್ರೀ ಮಹಮದ್ ಲೈಕುದ್ದೀನ್.—ಸಾರ್.....

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ ಕುಳಿತುಕೊಳ್ಳಿ. ಈ ರೀತಿ ಆದರೆ ನಾನು ಉಳಿದ ಪ್ರಶ್ನೋತ್ತರ ಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ. ಇಲ್ಲ ಆಗುವುದಿಲ್ಲ. ಕುಳಿತುಕೊಳ್ಳಿ. ತಾವು ಕೇಳಿ ಮೂಡಲ ಗಿರಿಯಪ್ಪನವರೇ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ. ನಾವು ಹಿಂದೆ ಕುಳಿತಿದ್ದೇವೆಂದು ಈ ರೀತಿ ತಾರತಮ್ಯ ಮಾಡಿದರೆ ಹೇಗೆ. ಅವಕಾಶ ಕೊಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಮೂಡಲಗಿರಿಯಪ್ಪನವರೇ ತಾವು ಪ್ರಶ್ನೆ ಕೇಳಿ. ಈ ರೀತಿ ಆದರೆ ನಾನು ಉಳಿದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ.

ಶ್ರೀ ಮಹಮದ್ ಲೈಕುದ್ದೀನ್.—ಮಿಸ್ಟರ್ ಸ್ಪೀಕರ್ ಸಾರ್.....

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ. ತಾವು ಕುಳಿತುಕೊಳ್ಳಿ. ಇನ್ನು ೧೦ ಪ್ರಶ್ನೆಗಳು ಇವೆ. ಅವುಗಳನ್ನು ಲ್ಯಾಪ್ಸ್‌ಮಾಡಬೇಕಾಗುತ್ತದೆ. ಆಗುವುದಿಲ್ಲ ಕುಳಿತುಕೊಳ್ಳಿ.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದು

೪೧೯. ಶ್ರೀ ಸಿ.ಪಿ.ಮೂಡ್ಲಗಿರಿಯಪ್ಪ(ಶಿರಾ).—ಮಾನ್ಯ ಭಾರಿ ಮತ್ತು ಮಾಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕದಲ್ಲಿ ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಸುಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು ಹಾಗೂ ಸುಟ್ಟು ಹೋದ ಟ್ರಾನ್ಸ್‌ಫಾರ್ಮರುಗಳ ಒಟ್ಟು ಮೌಲ್ಯ ಎಷ್ಟಾಗುತ್ತದೆ ? ಇದರಿಂದ ಸರಕಾರದವರಿಗಾಗಿರುವ ನಷ್ಟವೆಷ್ಟು ?

ಆ) ಇದನ್ನು ತಡೆಗಟ್ಟಲು ಸರ್ಕಾರದವರು ಶಾಶ್ವತ ಕ್ರಮ ಕೈಗೊಳ್ಳುವರೆ ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಕರ್ನಾಟಕದಲ್ಲಿ ೧೯೮೬-೮೭ರ ಸಾಲಿನಲ್ಲಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು, ೧೯೮೭-೮೮ರಲ್ಲಿ ೭,೧೩೫ ವಿತರಣಾ ಟ್ರಾನ್ಸ್‌ಫಾರ್ಮರುಗಳೂ ಕೆಟ್ಟು ಹೋದವು. ಇವುಗಳ ಪೈಕಿ ದುರಸ್ತಿ ಮಾಡಲು ಸಾಧ್ಯವಾದ ಟ್ರಾನ್ಸ್‌ಫಾರ್ಮರುಗಳನ್ನೆಲ್ಲಾ ದುರಸ್ತಿ ಮಾಡಿ ಪುನಃ ಬಳಸಲಾಗಿದೆ. ಹೆಚ್ಚು ನೋಷವಿರುವ

ಟ್ರಾನ್ಸ್‌ಫಾರ್ಮರಿಂಗಳಲ್ಲಿನ ಒಳ್ಳೆ ಭಾಗಗಳನ್ನು ತೆಗೆದು ಅದನ್ನು ದೋಷವಿರುವ ಇತರೆ ಟ್ರಾನ್ಸ್‌ಫಾರ್ಮರಿಂಗಳ ದುರಸ್ತಿಗೆ ಉಪಯೋಗಿಸಲಾಗುತ್ತಿದೆ. ಹೀಗಾಗಿ ಟ್ರಾನ್ಸ್‌ಫಾರ್ಮರಿಂಗಳು ಕೆಟ್ಟು ಹೋದಲ್ಲಿ ಅದನ್ನು ನಷ್ಟವೆಂದು ಪರಿಗಣಿಸಲಾಗುವುದಿಲ್ಲ.

ಆ) ಪ್ರತಿ ಟ್ರಾನ್ಸ್‌ಫಾರ್ಮರಿಗೂ ನಿಯತ ಕಾಲಿಕ ತಪಾಸಣೆ, ಪರೀಕ್ಷೆ ಇತ್ಯಾದಿ ಪಾಲನಾ ಕಾರ್ಯಗಳು ನಿಗಧಿತವಾಗಿದ್ದು ಅದನ್ನು ಮಾಡಲಾಗುತ್ತದೆ. ಸಾಧ್ಯವಾದಷ್ಟು ಮಿಂನ್ಚೆಚ್ಚರಿಕೆ ಕ್ರಮ ಕೈಕೊಳ್ಳಲಾಗುತ್ತಿದೆ.

ಶ್ರೀ ಪಿ. ಸಿ. ಮಂಡಲಗಿರಿಯಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ರೈತರಿಗೆ ಉದ್ದಿಮೆದಾರರಿಗೆ ಜೀವನಾಡಿಯಾಗಿರತಕ್ಕಂಥ ವಿದ್ಯುತ್ ಸರಬರಾಜಿನ ಕೊರತೆಯಿಂದ ಎಲ್ಲರೂ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ. ಏತ್ತಾ ಈ ಟ್ರಾನ್ಸ್‌ಫಾರ್ಮರ್ಸ್ ಫೈಲ್ಯೂರ್ ಆಗುವುದರಿಂದ ಕೆ ಇ ಬಿ ಯವರಿಗೂ ಕ್ಯಾಪಿಟಲ್ ಲಾಸ್ ಆಗುತ್ತದೆ. ಮತ್ತು ರೈತರಿಗೆ ಹಾಗೂ ಉದ್ದಿಮೆದಾರರಿಗೂ ಕೂಡ ಬಹಳ ತೊಂದರೆಯಾಗುತ್ತದೆ. ಈ ಟ್ರಾನ್ಸ್‌ಫಾರ್ಮರ್‌ಗಳನ್ನು ಪರ್ಚೇಜ್ ಮಾಡತಕ್ಕಂಥ ಸಂದರ್ಭದಲ್ಲಿ ಕಳಪೆ ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಏನಾದರೂ ಪರ್ಚೇಸ್ ಮಾಡಿದ್ದೀರಾ ? ಅಥವಾ ಸರ್ವೀಸ್ ಮಾಡತಕ್ಕಂಥ ಸಂದರ್ಭದಲ್ಲಿ ಯಾರಾದರೂ ಒಬ್ಬ ರಿಟೈರ್ಡ್ ಆಫೀಸರ್ ಇಂತಹ ಒಂದು ಸಂಸ್ಥೆ ನಡೆಸುತ್ತಿದ್ದರೆ ಅವರಿಗೆ ಈ ಕೆಲಸ ಎಂಟ್ರಸ್ಟ್ ಮಾಡಿದ್ದೀರಾ ಹೇಗೆ ? ದಯಮಾಡಿ ಉತ್ತರ ಕೊಡಿ.

೧೨-೦ ಮಧ್ಯಾಹ್ನ

ಶ್ರೀ ಜೆ. ಹೆಚ್. ಪಟೇಲ್.—ಟ್ರಾನ್‌ಫಾರ್ಮರ್‌ಗಳನ್ನು ಯಾರೋ ರಿಟೈರ್ಡ್ ಆಫೀಸರ್ ಮೂಲಕ ಕೊಂಡುಕೊಳ್ಳಲಾಗುತ್ತಿದೆಯೆಂದು ಹೇಳಿದ್ದಾರೆ. ಅದರ ಬಗ್ಗೆ ನನಗೆ ಗೊತ್ತಿಲ್ಲ. ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಳ್ಳುವಾಗ ಅವುಗಳ ಕೆಪಾಸಿಟಿಯನ್ನು ನೋಡ್ಕೊತೆಗೆದುಕೊಳ್ಳಲಾಗುತ್ತದೆ. ಟ್ರಾನ್ಸ್‌ಫಾರ್ಮರ್‌ಗಳಿಗೆ ಕಂಪನಿಯವರು ಗ್ಯಾರಂಟಿ ಪೀರಿಯಡ್ ಕೊಡುತ್ತಾರೆ. ಗ್ಯಾರಂಟಿ ಪೀರಿಯಡ್ ಒಳಗೆ ಏನಾದರು ಕೆಟ್ಟುಹೋದರೆ ಕಂಪನಿಯವರೇ ರಿಪೇರಿ ಮಾಡಿಕೊಡುತ್ತಾರೆ. ಅದೂ ಅಲ್ಲದೆ ಮಾನ್ಯ ಅಧ್ಯಕ್ಷರೇ, ಕೆಡದೇ ಇರತಕ್ಕಂಥ ಮತ್ತು ಬರ್ನ್ ಆಗದೇ ಇರತಕ್ಕಂಥ ಟ್ರಾನ್ಸ್‌ಫಾರ್ಮರ್‌ಗಳನ್ನು ಇದುವರೆಗೆ ಜಗತ್ತಿನಲ್ಲಿ ಯಾರು ತಯಾರು ಮಾಡಿಲ್ಲ. ಬರ್ನ್ ಆಗದೇ ಇರತಕ್ಕಂಥ ಬಲ್ಬ್‌ಗಳನ್ನೂ ಸಹ ಯಾರೂ ತಯಾರು ಮಾಡಿಲ್ಲ. ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಳ್ಳುವಾಗ ತಾರತಮ್ಯ ಮಾಡಿರಂವುದು ಮಾನ್ಯ ಸದಸ್ಯರ ಗಮನಕ್ಕೆ ಬಂದರೆ ಅದನ್ನು ನನಗೆ ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ೫೫ ಸಾವಿರ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಂಡುಕೊಂಡಿರುವಾಗ ಅದರಲ್ಲಿ ಮೂರ್ನಾಲ್ಕು ಸಾವಿರ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಕೆಡುವುದು ಸ್ವಾಭಾವಿಕ. ಯಾರಿಗಾದರು ಫೇವರ್ ಮಾಡುವುದಕ್ಕಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಕೆ. ಇ. ಬಿ; ನವರು ಕೊಂಡು ಕೊಂಡಿದ್ದು ನನಗೆ ತಿಳಿದು ಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಪಿ. ಮಂಡಲಗಿರಿಯಪ್ಪ.—ಮಾನ್ಯ ಸಚಿವರು ಬಲ್ಬ್‌ಗಳು ಬರ್ನ್ ಆಗುವುದಕ್ಕೂ ಟ್ರಾನ್ಸ್‌ಫಾರ್ಮರ್‌ಗಳು ಬರ್ನ್ ಆಗುವುದಕ್ಕೂ ಕಂಪೇರ್ ಮಾಡುತ್ತಿದ್ದಾರೆ. ಬಲ್ಬ್‌ಗಳ ಕಾಸ್ಟ್ ಏನು ? ಟ್ರಾನ್ಸ್‌ಫಾರ್ಮರ್‌ಗಳ ಕಾಸ್ಟ್ ಏನು ? ಒಂದೊಂದು ಟ್ರಾನ್ಸ್‌ಫಾರ್ಮರ್‌ಗೆ ೧೦ ಸಾವಿರ ರೂಪಾಯಿಗಳಿಂದ ಕೋಟಿಗಟ್ಟಲೇ ರೂಪಾಯಿಗಳವರೆಗೆ ಖರ್ಚಾಗುತ್ತದೆ. ಒಂದು ವರ್ಷಕ್ಕೆ ಐದು ಸಾವಿರದಿಂದ ಏಳು ಸಾವಿರಗಳವರೆಗೆ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋದರೆ, ಅವುಗಳ ಮೌಲ್ಯ ಎಷ್ಟಾಗುತ್ತದೆ ? ಎಂಬುದರ ಬಗ್ಗೆ ಯೋಚನೆ ಮಾಡಬೇಕು ಇಷ್ಟು ಲೈಟ್ ಆಗಿ ೩ ಸಾವಿರ ೪ ಸಾವಿರ ಟ್ರಾನ್ಸ್‌ಫಾರ್ಮರ ಗಳು ಸುಡುವುದು ಸಹಜ ಅದಕ್ಕೆ ಏನು ಮಾಡಲಿಕ್ಕೆ ಆಗುವುದಿಲ್ಲ ವೆಂದು ಬೇಜವಾಬ್ದಾರಿಯಿಂದ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ದಯವಿಟ್ಟು ಆ ಭಾವನೆಯನ್ನು ತಾವು ತಾಳಬಾರದು. ಟ್ರಾನ್ಸ್‌ಫಾರ್ಮರುಗಳು ಸುಟ್ಟುಹೋಗುವುದರಿಂದ ರೆವಿನ್ಯೂ ಲಾಸ್ ಆಗುವುದಲ್ಲದೆ ವೋಲ್ಟೇಜ್ ಡ್ರಾಪ್ ಕೂಡಾ ಆಗುತ್ತದೆ. ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ಎನ್. ಜಿ. ಇ. ಎಫ್. ನಲ್ಲೇ ಒಂದು ಸರ್ವೀಸ್ ಸ್ಟೇಷನ್‌ನ್ನು ಏಕೆ ತೆರೆಯಬಾರದು. ಎನ್. ಜಿ. ಇ. ಎಫ್ ನಲ್ಲಿ ಸರ್ವೀಸ್ ಸ್ಟೇಷನ್ ಪ್ರಾರಂಭ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ನಾನು ಕೇಳುತ್ತೇನೆ ?

ಶ್ರೀ ಜೆ. ಹೆಚ್. ಪಟೇಲ್.—ನಾನು ಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದೀನೋ. ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದೀನೋ ಎಂಬುದನ್ನು ಸದಸ್ಯರ ಅಭಿಪ್ರಾಯಕ್ಕೇ ಬಿಡುತ್ತೇನೆ. ನಾನು ಹೇಳಿದ್ದು ಏನೆಂದರೆ ೫೫ ಸಾವಿರ ಟ್ರಾನ್ಸ್‌ಫಾರ್ಮರುಗಳನ್ನು ಕೊಂಡುಕೊಂಡಿರುವಾಗ ಆದರಲ್ಲಿ ೫ ಸಾವಿರ ಟ್ರಾನ್ಸ್‌ಫಾರ್ಮರುಗಳು ಕೆಡಬಹುದೆಂದು ಹೇಳಿದ್ದೇನೆ. ಕೆಡದೇ ಇರತಕ್ಕಂಥ ಟ್ರಾನ್ಸ್‌ಫಾರ್ಮರುಗಳನ್ನು ಇದುವರೆಗೆ ಯಾರೂ ತಯಾರು ಮಾಡಿಲ್ಲ. ಟ್ರಾನ್ಸ್‌ಫಾರ್ಮರುಗಳು ಬರ್ನ್ ಆಗುವುದರಿಂದ ಸರ್ವೀಸ್‌ಗೆ ತೊಂದರೆಯಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಇರಿಗೇಷನ್ ಪಂಪ್‌ಸೆಟ್ ಆಗಬಹುದು. ಇಂಡಸ್ಟ್ರಿಗಳಾಗಬಹುದು ಇವುಗಳಿಗೆ ವೋಲ್ಟೇಜ್ ಡ್ರಾಪ್ ಆದರೆ ತೊಂದರೆಯಾಗುತ್ತದೆ. ಇದಕ್ಕಾಗಿ ಸಿಸ್ಟವಮ್ ಇಂಪ್ರೂವ್‌ಮೆಂಟ್ ಸ್ಕೀಮ್‌ನ್ನು ನಾವು ಜಾರಿ ಮಾಡುತ್ತಿದ್ದೇವೆ. ಒಂದೇ ಟ್ರಾನ್ಸ್‌ಫಾರ್ಮರ್ ಮೇಲೆ ಬೀಳುವ ಹೆಚ್ಚು ಲೋಡನ್ನು ಕಡಿಮೆ ಮಾಡುವುದಕ್ಕಾಗಿ ಹೆಚ್ಚು ಟ್ರಾನ್ಸ್‌ಫಾರ್ಮರುಗಳನ್ನು ಜೋಡಿಸಿ ಉತ್ತಮ ರೀತಿಯಲ್ಲಿ ಟ್ರಾನ್ಸ್‌ಫಾರ್ಮರುಗಳು ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇಂಪ್ರೂವ್‌ಮೆಂಟ್ ಕೆಲಸ ಮಾಡುತ್ತಾ ಹೋಗುತ್ತಿದ್ದೇವೆ. ಆಮೇಲೆ ಮಾನ್ಯ ಸದಸ್ಯರು ಯಾರೋ ರಿಟೈರ್ಡ್ ಆಫೀಸರ್ ಮೂಲಕ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಂಡುಕೊಳ್ಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ, ಅದರ ಬಗ್ಗೆ ನನಗೆ ಬರೆದು ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೆಗಳ ವೇಳೆ ಮುಕ್ತಾಯವಾಯಿತು. ಆದರೂ ಇನ್ನೂ ೧೦ ಪ್ರಶ್ನೆಗಳು ಹಾಗೆ ಉಳಿದುಕೊಂಡಿವೆ. ಈ ೧೦ ಪ್ರಶ್ನೆಗಳಲ್ಲಿ ೯ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿರುವುದರಿಂದ ಪುನ: ಆಬ್ಸೆಂಟ್ ಆದವರ ಹೆಸರುಗಳನ್ನು ಕರೆಯುತ್ತೇನೆ, ಯಾರು ಪ್ರಶ್ನೆ ಹಾಕಿರುತ್ತಾರೋ ಅವರು ಮಾತ್ರ ಕೇಳಬೇಕು. ಮಾನ್ಯ ಸದಸ್ಯರುಗಳ ವಂತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ವಂತ್ತೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಒಬ್ಬರು ಒಂದು ಸಪ್ಲಿಮೆಂಟರಿ ಪ್ರಶ್ನೆಯನ್ನು ಮಾತ್ರ ಕೇಳತಕ್ಕದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಬ್ಸೆಂಟ್. ಶ್ರೀ ವಸಂತ ಬಂಗೇರಾ ಅವರೇ ತಾವು ಕೇಳಿ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಜಲಪಾತಗಳಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ

೪೦೫೮ ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ)....ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸುಮಾರು ೧೦೦ ರಿಂದ ೩೦೦ ಅಡಿಗಳಷ್ಟು ಎತ್ತರದಿಂದ ಧುಮುಕುವ ಹಲವು ಜಲಪಾತಗಳಿದ್ದು, ಇದರಿಂದ ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಿದೆ ಈ ಕುರಿತು ಶೀಘ್ರ ಅನ್ವೇಷಣೆಗೆ ಪಾಗೂ ಸೂಕ್ತ ಕ್ರಮ ಕೈಗೊಳ್ಳುವಿರಾ,

ಆ) ತಾಲ್ಲೂಕಿನ ಜನತೆಗೆ ತೊಂದರೆಯಾಗುವ ಹಾಗೂ ಜನತೆ ವಿರೋಧಿಸುತ್ತಿರುವ "ನೆರಿಯಾ ಯೋಜನೆಯನ್ನು" ಕೈ ಬಿಟ್ಟು ಮೇಲ್ಕಾಣಿಸಿದ ಯೋಜನೆಯನ್ನು ಎಷ್ಟು ಸಮಯದೊಳಗೆ ಕೈಗೊಳ್ಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಹೌದು

ಆ) ಅನ್ವೇಷಣಾ ಕೆಲಸವನ್ನು ಪ್ರಾರಂಭಿಸಿ ಆದಷ್ಟು ಬೇಗನೆ ಮುಗಿಸಲಾಗುವುದು.

ಶ್ರೀ ಜೆ. ಹೆಚ್. ಪಟೇಲ್.—ಉತ್ತರವನ್ನು ಕೊಟ್ಟಿದ್ದೇನೆ. ಮಿನಿ ವಿದ್ಯುತ್ ಯೋಜನೆಗಳನ್ನು ಸಹ ನಾವು ಮಾಡುತ್ತೇವೆ.